## ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ , ರಟ್ಟೀಹಳ್ಳಿ

**ಕ್ರಿಮಿನಲ್ ಮೊಕದ್ದಮೆ ನಂಃ 741/2022**

**ಸಿ.ಡಬ್ಲ್ಯೂ-13 ಪಿ.ಡಬ್ಲ್ಯೂ-7**

ಸಾಕ್ಷಿಯ ಹೆಸರು ಃಐಮ್ ಟಿ ಕರಿಯಣ್ಣನವರ

ತಂದೆಯ ಹೆಸರು ಃಮಲ್ಲಪ್ಪ ತಿಪ್ಪಣ್ಣ ಕರಿಯಣ್ಣನವರ

ವಯಸ್ಸು ಃ60 ವರ್ಷ

ಉದ್ಯೋಗ ಃಎ ಎಸ್ ಐ ಹಂಸಭಾ ಪಿ ಎಸ್

ವಾಸಸ್ಥಳ ಃಹಿರೇಕೆರೂರು.

ದಿನಾಂಕಃ 07-07-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ದಿನಾಂಕ 10.06.2017 ರಿಂದ 2020 ರವರೆಗೆ ನಾನು ರಟ್ಟೀಹಳ್ಳಿ ಠಾಣೆಯಲ್ಲಿ ಮುಖ್ಯಪೇದೆ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 03.05.2019 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 06.00 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ಪಿರ್ಯಾದಿ ಹಾಗೂ ಒಬ್ಬ ಆರೋಪಿ ಹಾಗೂ ಒಂದು ಬಾಲ್ ಪೆನ್ನು ಹಾಗೂ ಒಂದು ಒಸಿ ಚೀಟಿ ಹಾಗೂ ಒಂದು ಮೊಬೈಲ್ ಹಾಗೂ ನಗದು ಹಣ 8,930/- ಹಾಜರುಪಡಿಸಿರುತ್ತಾರೆ. ಸದರಿ ಪಿರ್ಯಾದಿಯ ಆಧಾರದ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 36/2019 ರಡಿ ಪ್ರಕರಣ ದಾಖಲಿಸಿ ಪ.ವ.ವರದಿಯನ್ನು ತಯಾರಿಸಿ ಹಾಗೂ ಆರೋಪಿತನನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸ್ವತ್ತಿನ

ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಪಿರ್ಯಾದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3(ಬಿ) ಎಂದು ಗುರುತಿಸಲಾಯಿತು.

ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸ್ವತ್ತಿನ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಜಪ್ತಾದ ಮುದ್ದೆ ಮಾಲು 1 ರಿಂದ 4 ನ್ನು ನೋಡಿದರೆ ನಾನು ಗುರುತಿಸಬಲ್ಲೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿತನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎಮ್ ಬಿ ಪಿ ವಕೀಲರಿಂದ:**

ನಾನು ಚಾಸಾ-1 ರವರಿಂದ ದೂರು ಸ್ವೀಕರಿಸುವ ಮೊದಲು ಸಾರ್ವಜನಿಕರು ಮೋಸ ಹೋಗಿರುತ್ತಾರೆ ಎಂದು ಯಾವುದೇ ದೂರು ಬಂದಿರುವುದಿಲ್ಲ. ಅದೇ ರೀತಿ ನಮ್ಮ ಸಿಬ್ಬಂದಿಯವರು ಯಾವುದೇ ರೀತಿಯ ಮೋಸ ಆಗಿರುತ್ತದೆಂದು ಯಾವುದೇ

ಪಿರ್ಯಾದಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ಚಾಸಾ-1 ನನ್ನ ಮೇಲಾಧಿಕಾರಿ ಇರುತ್ತಾರೆ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ. 1 ನೇ ಆರೋಪಿತನ ತಪ್ಪು ಇಲ್ಲದೇ ಇದ್ದರೂ ಸಹ ಆತನನ್ನು ದಸ್ತಗಿರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-4 ರಿಂದ ಚಾಸಾ-7 ರವರ ಹೇಳಿಕೆಗಳನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲಿಗೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟೀಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 741/2022**

**ಸಿ.ಡಬ್ಲ್ಯೂ-10     ಪಿ.ಡಬ್ಲ್ಯೂ-6**

ಸಾಕ್ಷಿಯ ಹೆಸರು ಃವೀರಪ್ಪ ಕಾಯಕದ

ತಂದೆಯ ಹೆಸರು ಃಸಿದ್ದಪ್ಪ

ವಯಸ್ಸು ಃ56 ವರ್ಷ

ಉದ್ಯೋಗ ಃಕ್ಷೌರಿಕ ಕೆಲಸ

ವಾಸಸ್ಥಳ ಃರಟ್ಟೀಹಳ್ಳಿ

ದಿನಾಂಕಃ 07-07-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಚಾಸಾ-9 ಮತ್ತು 11 ರವರ ಪರಿಚಯವಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಪರಿಚಯವಿರುವುದಿಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ಆರೋಪಿತರು ಜನರಿಗೆ 1 ರೂಪಾಯಿಗೆ 80 ರೂಪಾಯಿ ಕೊಡುವುದಾಗಿ ಹೇಳಿ ನಂಬರಿಗೆ ಹಣ ಕಟ್ಟದರೆ ನಿಮಗೆ ಹಣ ಬರುತ್ತದೆ ಅಂತಾ ನಂಬಿಸಿ ಅವರಿಂದ ಹಣ ಪಡೆದು ಬಾಂಬೆ ಮಟಕಾ ಮುಂಬರುವ ಮತ್ತು ಕೊನೆಗೆ ಬರುವ ಅಂಕಿ ಸಂಖ್ಯೆಗಳ ಚೀಟಿಯನ್ನು ಬರೆದುಕೊಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನಾನು 2 -3 ಬಾರಿ ಹಣ ಕಟ್ಟಿದರೂ

ಸಹ ಆದರೆ ನನಗೆ ಒಮ್ಮೆಯೂ ಯಾವುದೇ ಹಣ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ರೀತಿ ಆರೋಪಿತರು ಅನೇಕ ಜನರಿಗೆ ನಂಬಿಸಿ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ ಪಿ -5 ಎಂದು ಗುರುತಿಸಲಾಯಿತು. ಪ್ರಕರಣದ ಬಗ್ಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಈಗ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ ಎಮ್ ಬಿ ಪಿ ವಕೀಲರಿಂದಃ**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 741/2022**

**ಸಿ.ಡಬ್ಲ್ಯೂ-15 ಪಿ.ಡಬ್ಲ್ಯೂ-5**

| | |
|---|---|
| ಸಾಕ್ಷಿಯ ಹೆಸರು | ಃಶಶಿಧರ ಯು ಜೆ |
| ತಂದೆಯ ಹೆಸರು | ಃಯು ಜಯಲಿಂಗಪ್ಪ |
| ವಯಸ್ಸು | ಃ60 ವರ್ಷ |
| ಉದ್ಯೋಗ | ಃನಿವೃತ್ತ ಪಿ.ಐ ಹಾವೇರಿ |
| ವಾಸಸ್ಥಳ | ಃಹಾವೇರಿ. |

ದಿನಾಂಕಃ 07-07-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಜುಲೈ 2019 ರಿಂದ ಮೇ 2020 ರವರೆಗೆ ನಾನು ರಟ್ಟಿಹಳ್ಳಿ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 11.07.2019 ರಂದು ಪ್ರಕರಣದ ಕಡತವನ್ನು ಚಾಸಾ-14 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿ ದಿನಾಂಕ 25.10.2019 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಪಂಚನಾಮೆ ಮಾಡಿ ಜಪ್ತಾದ ಮೊಬೈಲ್ ನ್ನು 1 ನೇ ಆರೋಪಿತನಿಗೆ ನೀಡಿರುತ್ತೇನೆ. ನಂತರ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಮೋಬೈಲ್ ಬಿಡುಗಡೆ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-4(ಎ) ಎಂದು ಗುರುತಿಸಲಾಯಿತು.

ಜಪ್ತಾದ ಮೊಬೈಲ್ ನ್ನು ನೋಡಿದರೆ ನಾನು ಗುರುತಿಸಬಲ್ಲೆ.

**<u>ಪಾಟೀಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎಮ್ ಬಿ ಪಿ ವಕೀಲರಿಂದ:</u>**

ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತಾದ ಮುದ್ದೆ ಮಾಲಿಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

**Sd/-**
ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ